ಮುಖ್ಯವಾದ ಪ್ರಶ್ನೆಗಳನ್ನು ಹಾಕಿದ್ದರೆ, ಅವುಗಳನ್ನು ನೀವು starred questions ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ ಅಲ್ಲಿ ಏನಾದರೂ ನಡೆಯುತ್ತಿದ್ದರೆ, ಅದು ನಮಗೂ ಗೊತ್ತಾಗಬೇಕಲ್ಲ ವಾಸ್ತವಂಶವನ್ನೇ ನಾನು charge ಎಂದು ಹೇಳುತ್ತಿದ್ದೇನೆ ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ ನಾನು Calling Attention ಕೊಟ್ಟರೆ, ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತಿದ್ದಾರೆ ಮಾಜಿ ವಿಧಾನಸಭೆಯ ಅಧ್ಯಕ್ಷರಿಗೇ ನೀವು ಹೀಗೆ ಮಾಡುತ್ತಿದ್ದೀರೆಂದರೆ, ಇನ್ನು ನಮ್ಮ ಗತಿಯೇನು? ನಮಗೆ ಅರ್ಥವಾಗಬೇಕಲ್ಲ

ಶ್ರೀ ಎಸ್ ಎಸ್ ಪಾಟೀಲ್ ತಾವು ತಪ್ಪು ಅರ್ಥ ಮಾಡಿಕೊಳ್ಳಬೇಡಿ

ಶ್ರೀ ಜೆ ಸಿ ಮಾಧುಸ್ವಾಮಿ · ಅವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ

ಶ್ರೀ ಎಸ್ ಎಸ್ ಪಾಟೀಲ್ ಅವರು ಮಾತನಾಡುತ್ತಾ ನಾವು questions ಹಾಕಿದರೆ, ಅವು unstarred questions ಆಗುತ್ತವೆ ಅವು starred questions ಆಗಿ ಬರುವುದಿಲ್ಲವೆಂದು, ಬೇಕಾದ ಪ್ರಶ್ನೆಗಳನ್ನು unstarred ಮಾಡುತ್ತಾರೆಂದರು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ರಮೇಶ್ ಕುಮಾರ್‌ರವರೆ, ಒಂದು ನಿಮಿಷ ಮಾನ್ಯ ಅರಣ್ಯ ಸಚಿವರು ನನ್ನ ಪ್ರಶ್ನೆಗೆ

ಉಪಾಧ್ಯಕ್ಷರು ಅಲ್ಲಿಗೆ ಹೋಗಿ ಬರುತ್ತೇವೆಂದು ಹೇಳಿದ್ದಾರಲ್ಲ

ಶ್ರೀ ಸಿ ಚನ್ನಿಂಗಪ್ಪ · ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ, ನಾವು ಬೆಳ್ಳಗ್ಗೆ ಅದರ ಬಗ್ಗೆ ಮತ್ತೆ ಉತ್ತರ ಕೊಡುವ ಕೆಲಸ ಮಾಡುತ್ತೇವೆ ಇವತ್ತು ನವಿಲುಗಳನ್ನು ಕೊಲ್ಲುವುದರ ಹಿಂದೆ ಯಾರ್ಯಾರಯ ಇದ್ದಾರೆಂಬುದನ್ನು ಕಂಡು ಹಿಡಿದು, ಅದರ ಬಗ್ಗೆ ಹಿರಿಯ ಮಾಜಿ ಮಂತ್ರಿಗಳು ಏನು ಹೇಳುತ್ತಾರೋ, ಅದರಂತೆ ಕರಿಣವಾದ ಶಿಕ್ಷೆ ವಿಧಿಸುವ ಕೆಲಸವನ್ನು ಇಲಾಖೆಯು ಮಾಡುತ್ತದೆ

ಶ್ರೀ ವಾಟಾಳ್ ನಾಗರಾಜ್ . ನೀವು ಅಲ್ಲಿಗೆ ಹೋಗಬೇಕು, ಸಚಿವರಾದ ನಿಮ್ಮ ಬಗ್ಗೆ ನಮ,ಗೆ ಗೌರವವಿದೆ ಇಷ್ಟೊಂದು ಬೇಜವಾಬ್ದಾರಿ ಉತ್ತರ

ಉಪಾಧ್ಯಕ್ಷರು · ಚನ್ನಿಗಪ್ಪನವರೆ, ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಪಕ್ಷಿ ಕುಲ ನಾತವಾಗುತ್ತಿದೆ ಯಾರೂ ಕೇಳುವವರಿಲ್ಲ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಇ) **ವಿಷಯ** ಸಾರಿಗೆ ಇಲಾಖೆಯಲ್ಲಿ ವಿಶೇಷವಾಗಿ ಮೋಟಾರು ಇನ್ಸ್‌ಪೆಕ್ಟರ್‌ಗಳ ಅವ್ಯವಹಾರಗಳು, ನೇಮಕಾತಿಗಳಲ್ಲಿ ಸ್ವಜನ ಪಕ್ಷಪಾತ ಇತ್ಯಾದಿ ಬಗ್ಗೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸಾರಿಗೆ ಮಂತ್ರಿಗಳ ಗಮನಕ್ಕೆ ಶೂನ್ಯ ವೇಳೆಯಲ್ಲಿ ಸಾರಿಗೆ ಇಲಾಖೆಯಲ್ಲಿ ವಿಶೇಷವಾಗಿ ಮೋಟಾರು ಇನ್ಸ್‌ಪೆಕ್ಟರ್‌ಗಳ ಅವ್ಯವಹಾರಗಳು, ನೇಮಕಾತಿಗಳು, ಇಲಾಖೆಯಲ್ಲಾಗಿರುವ ಸ್ವಜನ ಪಕ್ಷಪಾತದ ಬಗ್ಗೆ ನಾನು ಒಂದು ನೋಟೀಸ್ ಕೊಟ್ಟಿದ್ದೆ ಹೇಳಿಕೆಯನ್ನು ನಾನು ಓದಿದೆ ಪುನಃ ಅವರು ಅದನ್ನು ಓದಬೇಕಾದ ಅಗತ್ಯವಿಲ್ಲ ನಾನು ಅವರಿಗೆ specific ಆಗಿ, ವಿಶೇಷವಾಗಿ ನಿಮ್ಮ ಅನುಮತಿ ಪಡೆದು 2–3 ವಿಚಾರಗಳನ್ನು ಗಮನಕ್ಕೆ ತಂದು ಬಿಡುತ್ತೇನೆ ನೀವು ಸಾರಾಸಗಟಾಗಿ ನಿಮ್ಮ ಇಲಾಖೆಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಏನು ಪದ್ಧತಿ ಇಟ್ಟೀದ್ದೀರಿ, ಎಂಬುದನ್ನೆಲ್ಲವನ್ನೂ ಹೇಳುತ್ತೇನೆ ಬಹುಶಃ, ನಿಮ್ಮ ಇಲಾಖೆಯಲ್ಲಿ ಯೋಗಾ ರಮೇಶ್ ಎಂಬ ಒಬ್ಬ inspector ಇದ್ದಾರೆಂದು ಕಾಣುತ್ತದೆ ಇವರು ಬಿಜಾಪುರ ಜಿಲ್ಲೆಯ ಝಳಕಿಯಲ್ಲಿ ಕೆಲಸ ಮಾಡುತ್ತಿದ್ದರು ಇವರು ಕೆಲಸಕ್ಕೆ ಹೋಗಿಲ್ಲ ಅಧ್ಯಕ್ಷರೆ, ಅವರು officeಗೇ ಹೀಗಿಲ್ಲ ಆತ officeಗೆ ಹೋದಂತೆ ಬೇರೆಯವರು ರಿಜಿಸ್ಟರ್‌ನಲ್ಲಿ signature ಮಾಡುತ್ತಾರೆ Signature ಆತನದ್ದೇ? ಅಲ್ಲವೇ? ಎಂದು complaint ಬಂದ ಮೇಲೆ hand writing expertsಗೆ, forensic labಗೆ ಕಳುಹಿಸುತ್ತಾರೆ ಆ signature ಈತನದ್ದಲ್ಲವೆಂದು ಅವರು confirm ಮಾಡುತ್ತಾರೆ ಅದಷ್ಟೇ ಅಲ್ಲ, ಅದಾದ ನಂತರ ಒಂದು enquiry ಮಾಡುತ್ತಾರೆ Enquiryಯಲ್ಲಿ ಅದು ಪ್ರೂವ್ ಆಗಿದೆಯೆಂದು officers ಹೇಳುತ್ತಾರೆ ನಾನು ನಿಮಗೆ ಕೇಳುತ್ತೇನೆ ಯಾರ್ಯಾರು ಯಾವ್ಯಾವ ಜಾತಿಯಲ್ಲಿ ಹುಟ್ಟಬೇಕೆಂದು application ಹಾಕಿ ಏನೂ ತೆಗೆದುಕೊಂಡು ಬರುವುದಿಲ್ಲ ಹುಟ್ಟಿದ ಮೇಲೆ ಜಾತಿ ಎಂದು ಹೇಳುತ್ತಾರೆ ನಿಮ್ಮ ಮೇಲೆ ನಾನು ಜಾತಿ ಅಪಾದನೆ ಮಾಡುವುದಿಲ್ಲ ಆದರೆ, ಈ ಕೇಸ್‌ನಲ್ಲಿ ಇಲಾಖೆ ನಿಮ್ಮ ಕೈಯಲ್ಲಿದೆ, ನೀವು ಆಡಳಿತ ನಡೆಸುತ್ತಿದೀರಿ ನಿಮ್ಮದೇ ಸಮಾಜಕ್ಕೆ ಈ ಮನುಷ್ಯ ಸೇರುತ್ತಾನೆ ನಾನು ಇದನ್ನು ಸ್ವಜನ ಪಕ್ಷಪಾತವೆಂದು ಹೇಳಿದರೆ, ನಿಮ್ಮ ಮನಸ್ಸಿಗೆ ಆಯಾಸವಾಗುತ್ತದೆ ಇದನ್ನು ಬಹಳ ಒಳ್ಳೆಯ ಆಡಳಿತವೆಂದು ನಾನು ಕರೆಯಲೇ? ಹೇಳಿ ಇಷ್ಟೆಲ್ಲಾ allegations prove ಆಗಿರುವಂಥಾದ್ದು ಆಮೇಲೆ, AG ಮತ್ತು CAG ಯಿಂದ ನಿಮಗೆ ಏನು advice ಇದೆ? ನಿಮ್ಮ ಇಲಾಖೆಯಲ್ಲಿ ಯಾರು ಕೆಲಸ ಮಾಡಬೇಕು? ಕಮಿಷನರ್ ಆಗಿ ಯಾರು ಇರಬೇಕು? ಇದನ್ನು ತಾವು ಗಮನಿಸಿದ್ದೀರಾ? ಇವನ್ನೆಲ್ಲಾ ಯಾರು ಮಾಡುತ್ತಾರೆ? ಏಕೆ ಹೀಗಾಗುತ್ತದೆ? ನಿಮ್ಮ Motor Vehicle Inspectorsದು postings ಬಗ್ಗೆ ಹೇಳುವುದಾದರೆ ಈಗ check posts ಎಲ್ಲವನ್ನೂ computerized ಮಾಡಿದ್ದೀರಿ ಸುಮಾರು 50% Motor Vehicle Inspectors ಇವತ್ತು check postಗಳಲ್ಲೇ ಕೆಲಸ ಮಾಡುತ್ತಿದ್ದಾರೆ, ಇವರು check postಗಳಿಗೆ

ಹೋಗಿ ಏನು ಕೆಲಸ ಮಾಡುತ್ತಾರೆ? check postಗಳಲ್ಲಿ ಇವರಿಗೆ ಏನು ಅಂತಹ ವಿಶೇಷವಾದ ಆಸಕ್ತಿ? ಬೇಸರ ಪಟ್ಟುಕೊಳ್ಳಬೇಡಿ ನಮ್ಮ ಪರಸ್ಪರ ವೈಯಕ್ತಿಕ ಸಂಬಂಧಗಳು ಬೇರೆ ನಾವು ನಮ್ಮ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದ್ದರೆ, ಮೊನ್ನೆ ಮಾಧುಸ್ವಾಮಿಯವರು ಪ್ರಸ್ತಾಪಿಸಿದ ವಿಷಯಗಳ ಬಗ್ಗೆ ಇಡೀ ಸದನ ಮೆಚ್ಚಬೇಕು ಬಹುಶಃ, ಇತ್ತೀಚಿನ ದಿನಗಳಲ್ಲಿ ವಿರೋಧ ಪಕ್ಷಗಳಲ್ಲಿ ಯಾರೂ ಕೂಡ ಅಷ್ಟು ಯೋಗ್ಯವಾದ ಮಾತುಗಳನ್ನಾಡಿರುವುದಿಲ್ಲ ಗುಣಕ್ಕೆ ಮತ್ಸರವಿಲ್ಲ ನಮ್ಮ ಕೆಲಸ, ಕರ್ತವ್ಯವನ್ನು ನಾವ್ರ ಮಾಡಲೇಬೇಕು 50% Inspector chech postಗೆ ಹೀಗಿದ್ದಾರೆ ಹೋಗಿರುವವರು ಯಾರು? ಮತ್ತೆ ಅವರೆಲ್ಲರೂ ಪ್ರಭಾವಿಗಳೇ ಈ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಹೀಗಾಗಿ ಬಿಟ್ಟರೆ, ಸಾಮಾನ್ಯರಿಗೆ, ಸಣ್ಣಪುಟ್ಟ ಜನರಿಗೆ, ಏನೂ ಆಶ್ರಯ ಇಲ್ಲದಿರುವವರಿಗೆ ಗೌರವ ಬರುತ್ತದೆಯೇ? ನಂಬಿಕೆ ಬರುತ್ತದೆಯೇ? ಶಂಕರಮೂರ್ತಿಗಳೇ? ನೀವೇ ಹೇಳಿ Forensic Labಗೆ ಹೋಗಿ signature ಆತನದ್ದಲ್ಲವೆಂದು abscond ಆಗಿ ಬೇರೆಲ್ಲೋ ಇರತಕ್ಕಂಥವನನ್ನು, ಆ signature ನನ್ನದೇ ಎಂದು ಹೇಳುವವನನ್ನು, ನೀವು ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ ವಾಪಸ್ಸು ಆತನಿಗೆ posting ಕೊಡುತ್ತೀರಲ್ಲ, ಇದಕ್ಕೆ governance ಎಂದು ನಾವು ಕರೆಯಬೇಕೆ? ನನಗೆ ನಿಮ್ಮ ಕುಟುಂಬದ ಹಿನ್ನೆಲೆ ಗೊತ್ತು ನನಗೆ ನಿಮ್ಮ ವೈಯಕ್ತಿಕ ಪರಿಚಯವಿದೆ ನೀವು ಬುದ್ಧಿಪೂರ್ವಕವಾಗಿ ಇಂಥಾದ್ದೆಲ್ಲವನ್ನೂ endorse ಮಾಡುತ್ತೀರೆನ್ನುವ ಮಟ್ಟಕ್ಕೆ ನಾನು ಹೋಗುವುದಿಲ್ಲ ಆದರೆ ನೀವು ಆಡಳಿತದ ಕಡೆ ಗಮನಕೊಡುತ್ತಿಲ್ಲ ಅಥವಾ ನೀವು ನಾಮ್‌ಕೇವಾಸ್ತೆಗಾಗಿ ಮಂತ್ರಿಯಾಗಿದ್ದೀರಿ ಇಲ್ಲವೇ ಇಲಾಖೆಯನ್ನು ಮತ್ಯಾರೋ ನಡೆಸುತ್ತಿರಬೇಕು! ಅಲ್ಲವೇ, ಮಾಧುಸ್ವಾಮಿಗಳೇ? ಇವೆರಡೇ ಸಾಧ್ಯ ನಿಮ್ಮ ಯೋಗ್ಯತೆ, ನಿಮ್ಮ ದಕ್ಷತೆ, ನಿಮ್ಮ ವಿಚಾರ ನನಗೆ ಗೊತ್ತಿರುವಂತೆ, ನಿಮಗೆ ಪೂರ್ಣ ಸ್ವಾತಂತ್ರ್ಯವಿದ್ದರೂ ಇದರ ಬಗ್ಗೆ ನಿಮಗೆ ಅರಿವಿದ್ದಿದ್ದರೆ, ಬಹುಶಃ, ಇಂಥಾದ್ದನ್ನು ನಡೆಯುವುದಕ್ಕೆ ನೀವು ಬಿಡುತ್ತಿರಲಿಲ್ಲ ಇಲ್ಲವೇ ನೀವು ಯಾವುದೋ ಕಾರಣಕ್ಕೆ ಬೇಜಾರಾಗಿ ಬಿಟ್ಟಿದ್ದೀರಿ, ನೀವು ಆಡಳಿತದ ಕಡೆ ಗಮನ ಕೊಡುತ್ತಿಲ್ಲ "ಇಲ್ಲ, ನಾನು ಗಮನ ಕೊಡುತ್ತಿದ್ದೇನೆ, ನಾನು ಹುಷಾರಾಗಿದ್ದೇನೆ" ಎಂದರೆ, ನಿಮ್ಮ ಮಾತು ಇಲ್ಲಿ ನಡೆಯುತ್ತಿಲ್ಲ ನಿಮ್ಮ ಸರ್ಕಾರದಲ್ಲಿ ಮುಖ್ಯಮಂತ್ರಿಗಳು ನಾಮ್‌ಕೇವಾಸ್ತೆಗಾಗಿ ಇದ್ದೀರಿ ನಿಮಗೇ ಗೊತ್ತಾಗದಂತೆ ಯಾವುದೋ ಒಂದು ಅಗೋಚರ ಶಕ್ತಿ ಪಿಶಾಚಿ ತರಹ ಕೆಲಸ ಮಾಡುತ್ತಾ ಹೋಗುತ್ತಿದೆ ಆದುದರಿಂದಲೇ, ಈ ಎಲ್ಲಾ ಅನಾಹುತಗಳಾಗುತ್ತವೆ ಇದು ಆಗದಂತೆ ನೀವು ತಡೆ ಹಿಡಿಯಬೇಕು ಈಗ ನೀವು break ಹಾಕಬೇಕು You have to become the biggest Brake Inspector now ಏನು ಹೇಳುತ್ತೀರಿ? ದಯಮಾಡಿ ಅಧ್ಯಕ್ಷರ ಮುಖಾಂತರ ತಿಳಿಸಿ ನಾವು ಕಾಯುತ್ತಿರುತ್ತೇವೆ

ಶ್ರೀ ಎನ್ ಚಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರೆ, ಕಳುಹಿಸಿರುವಂತಹ ಪ್ರಶ್ನೆಗೆ ಉತ್ತರ ಓದುವುದು ಬೇಡ ಕೆಲವು points ಅನ್ನು ನಾನು raise ಮಾಡುತ್ತಿದ್ದೇನೆ ಅದಕ್ಕೆ ಉತ್ತರ ಕೊಡಿ ಎಂದು ಮೊದಲೇ ಹೇಳಿದ್ದಾರೆ ಮಾನ್ಯ ಹಿರಿಯ ಸದಸ್ಯರು ಸಭಾಧ್ಯಕ್ಷರಾಗಿದ್ದವರು ನಮಗೆಲ್ಲರಿಗೂ ಮಾರ್ಗದರ್ಶನ ನೀಡಿರುವವರು ಅವರು ಇಂತಹ ವಿಚಾರಗಳನ್ನು ಸರ್ಕಾರದ ಗಮನಕ್ಕೆ, ಸಭೆಯ ಗಮನಕ್ಕೆ ತಂದಾಗ, ನಾವು ಬೇಸರ ಪಟ್ಟುಕೊಳ್ಳುವುದರಲ್ಲಿ ಅರ್ಥವಿದೆ ಈ ರಾಜ್ಯದಲ್ಲಿ ಸ್ವಾತಂತ್ರ್ಯ ಬಂದ ನಂತರ ನಾವೆಲ್ಲರೂ ನೋಡಿಕೊಂಡು ಬಂದಿದ್ದೇವೆ ಇವೆಲ್ಲವೂ ಯಾವ ರೀತಿ ನಡೆಯುತ್ತಿವೆ, ಯಾವ್ಯಾವ ಸರ್ಕಾರಗಳು ಬಂದಾಗ ಯಾವ್ಯಾವ ರೀತಿ ಆಗುತ್ತಿವೆ, ಎಷ್ಟರ ಮಟ್ಟಿಗೆ ನಾವೆಲ್ಲರೂ ಪ್ರಾಮಾಣಿಕವಾದ ರೀತಿಯಲ್ಲಿ ಜನಪರ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದೇವೆ ಎನ್ನುವುದರ ಬಗ್ಗೆ ನಾನು ಹೊಸದಾಗಿ ಚರಿತ್ರೆ ಬಗ್ಗೆ ಹೇಳಬೇಕಾದಂತಹ ಅವಶ್ಯಕತೆ ಏನೂ ಇಲ್ಲವೆಂದು ನಾನು ಭಾವಿಸಿದ್ದೇನೆ ಒಂದು, ಯೋಗಾರಮೇಶ್, ಇನ್ಸ್‌ಪೆಕ್ಟರ್ ಬಗ್ಗೆ, ನಮ್ಮಲ್ಲಿ ಸುಮಾರು 250 ಜನ ಇನ್ಸ್‌ಪೆಕ್ಟರ್ ಇದ್ದಾರೆ, ಅವನ ವಿಳಾಸ, ಜಾತಿ ಮುಂತಾದವನ್ನೆಲ್ಲಾ ಇಂಡಿವಿಜುಯಲ್ ಆಗಿ ನಾನು ಗುರುತಿಸಲು ಆಗುವುದಿಲ್ಲ ಅದರ ಅವಶ್ಯಕತೆಯೂ ನನಗೆ ಇಲ್ಲ ಆ ಮನುಷ್ಯನು ಮಾಡಿದ ಅಪರಾಧದ ಹಿನ್ನೆಲೆಯಲ್ಲಿ ನಾನು ಮಂತ್ರಿಯಾದ ಮೇಲೆ ಆ ಕಡತ ಬಹುಶ ವಿಲೇವಾರಿಯಾಗಿಲ್ಲ ಆ ಕಡತವನ್ನು ಕ್ಲೋಸ್ ಮಾಡಿ ಮತ್ತೆ ಮಾಡುವ ಅವಕಾಶ ಕೊಟ್ಟಿಲ್ಲ ಅವರ ಮೇಲೆ ಏನು ಕೇಸ್, ಅದು ಪ್ರೂವ್ ಆಗಿತ್ತು, ನಂತರ ಅವರಿಗೆ ಒಳ್ಳೆಯ ಕಡೆ ಪೋಸ್ಟಿಂಗ್ಸ್‌ನ್ನು ಕೊಟ್ಟಿದ್ದಾರೆ, ನಾನು ತಕ್ಷಣ ಆಕಡತವನ್ನು ತರಿಸಿ ನಮ್ಮ ಇಲಾಖೆಯಲ್ಲಿ ಏನಾದರೂ ನನಗಿಂತ ಮೊದಲು ಇರಬಹುದು, ಯಾವುದೇ ಸಂದರ್ಭದಲ್ಲಿ ಇರಬಹುದು, ಅದನ್ನು ಮುಚ್ಚಿ ಹಾಕಿದ್ದರೆ, ಆ ಕಡತವನ್ನು ಬಚ್ಚಿಟ್ಟಿದ್ದರೆ ಖಂಡಿತ ಆ ಕಡತದ ಬಗ್ಗೆ ಯೂವುದೇ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಲೋಕಾಯುಕ್ತರು ಸುಮಾರು ಜನ ಇನ್ಸ್‌ಪೆಕ್ಟರ್‌ರವರ ಮನೆ ಮೇಲೆ ದಾಳಿ ಮಾಡಿ ಕೇಸನ್ನು ಫೈಲ್ ಮಾಡಿದ್ದಾರೆ, ಪ್ರಾಪರ್ಟಿಯನ್ನು ಸೀಜ್ ಮಾಡಿದ್ದಾರೆ ಲೆಕ್ಕ ಇಲ್ಲದಿರುವ ಹಣ, ಬಂಗಾರವನ್ನೆಲ್ಲ ಸೀಜ್ ಮಾಡಿದ್ದಾರೆ ಕೇಸನ್ನು ಹಾಕಿದ್ದಾರೆ ಅವರದೆಲ್ಲ ಏನಾಗಿದೆ? ಲೋಕಾಯುಕ್ತದಿಂದ ನಿಮಗೆ ಬಂದಿರುವ ವರದಿ ಏನಿದೆ ಯಾರು black sheep ಎಂದು identify ಆಗಿದ್ದಾರೆ ಅಂಥವರಿಗೆ ಪುನಹ ಏನಾದರೂ prime positing ಕೊಟ್ಟಿದ್ದೀರ? ದಯಮಾಡಿ ಲೋಕಾಯುಕ್ತದ correspondence ಏನಿದೆ ನೋಡಿ ಅಂಥವರು ಯಾರ್ಯಾರು ಎಲ್ಲೆಲ್ಲಿದ್ದಾರೆ ಎಂಬುದನ್ನು ನೋಡಿಕೊಳ್ಳಿ ಒಂದು ಕಡೆ ಲೋಕಾಯುಕ್ತ ರೈಡ್ ಮಾಡುವುದು, ಇಲ್ಲಿ ಟಿ ವಿ ಯವರು ಅದನ್ನೆಲ್ಲಾ

ತೋರಿಸುವುದು, ಜನರು ಬಹಳ ಚೆನ್ನಾಗಿದೆ ಎಲ್ಲರನ್ನು ಹಿಡಿದುಹಾಕಿಬಿಟ್ಟಿದ್ದಾರೆಂದು ತಿಳಿದುಕೊಳ್ಳುವುದು, ಮತ್ತೆ ಇನ್ನೊಂದು ಕಡೆ ಇವರು ಅವರಿಗೆ postings ಕೊಟ್ಟುಕೊಂಡು ಹೋಗುವುದು ಅವರು ಇಲ್ಲಿ ಹೋದದ್ದನ್ನೂ ಸೇರಿಸಿ consumerನಿಂದ ಡಬ್ಬಲ್ ವಸೂಲಿ ಮಾಡುತ್ತಾರೆ ಲೋಕಾಯುಕ್ತದ್ದು ಹೋಗಿರುತ್ತದಲ್ಲಿ ಇದೂ ಅದೂ ಸೇರಿಸಿ ಮತ್ತೆ ಅಲ್ಲಿ ಎರಡೆರಡು ಪಟ್ಟು ಕೊಡಬೇಕಾಗುತ್ತದೆ

ಶ್ರೀ ಎನ್ ಚಲುವರಾಯಸ್ವಾಮಿ : ತಾವು ಹೇಳೀದಂತೆ ಎಲ್ಲದಕ್ಕೂ ಅವಕಾಶ ಕೊಡುತ್ತಿದ್ದರು ಯೋಗಾರಮೇಶ್‌ಕುಮಾರರ ವಿಚಾರ, ಇರಬಹುದು, ಬೇರೆ ಯಾವುದೇ ವಿಚಾರ ಇರಬಹುದು ಲೋಕಾಯುಕ್ತದವರು ರೈಡ್ ಮಾಡಿ ಅವರ ಮೇಲೆ ವಿಚಾರಣೆ ಮಾಡಿ ಇರತಕ್ಕ ಕಡತದ ಬಗ್ಗೆ ಇಲಾಖೆ ಕ್ರಮ ತೆಗೆದುಕೊಂಡು ಅಥವಾ ತೆಗೆದುಕೊಳ್ಳದಿರುವ ಯಾವುದೇ ಕಡತ ಇರಬಹುದು ಕೂಡಲೇ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ Particular ಆಗಿ ಯೋಗಾರಮೇಶ್ ವಿಚಾರದ ಬಗ್ಗೆ ನಾನು ಯಾವುದೇ ಕಡತವನ್ನು ನೋಡಿಲ್ಲ ಅವನ ಹೆಸರಿನಲ್ಲಿ ನನ್ನ ಹತ್ತಿರ ಕಡತ ಬಂದಿಲ್ಲ ಕೂಡಲೇ ಆ ಕಡತವನ್ನು ತರಿಸಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಲೋಕಾಯುಕ್ತ ರೈಡ್ ಮಾಡಿರುವ ವಿಚಾರದಲ್ಲಿ, ಎರಡು ಮೂರು ಬಾರಿ ಲೋಕಾಯುಕ್ತ ರೈಡ್ ಮಾಡಿದೆ, ಇಬ್ಬರನ್ನು ಅಮಾನತ್ತು ಮಾಡುವ ಬಗ್ಗೆ ಶಿಫಾರಸ್ಸು ಮಾಡಿ ಕಳಿಸಿದ್ದಾಗ ಅಮಾನತ್ತು ಸಹ ಮಾಡಿ ವಿಚಾರಣೆಯನ್ನೂ ಮಾಡಿದ್ದೇವೆ ಮೊನ್ನೆ ಸಹ ನಮ್ಮ ಅಧಿಕಾರಿಗಳು ನನ್ನನ್ನು ಕೇಳಿದರು ಲೋಕಾಯುಕ್ತ office ನಿಂದ 8 ಜನರನ್ನು ಅಮಾನತ್ತು ಮಾಡುವ ಬಗ್ಗೆ ಕಳುಹಿಸಿದ್ದೇವೆಂದು ಹೇಳಿದರು ಆದರೆ ಅದಕ್ಕೆ ಲೋಕಾಯುಕ್ತದಿಂದ ಪತ್ರ ಬಂದಿಲ್ಲ ನಾವು ಲೋಕಾಯುಕ್ತದವರಿಗೆ ನಿಮ್ಮಿಂದ ಸ್ಪಷ್ಟವಾದ ಪತ್ರ ಬಂದಿಲ್ಲ ಎಂದು ಬರೆಯಿರಿ, ಏನಾದರೂ ದಾರಿಯಲ್ಲೇ ತಪ್ಪಿಹೋಗಿರಬಹುದು ಎಂದು ಹೇಳಿದೆ ಏಕೆಂದರೆ ಭ್ರಷ್ಟಾಚಾರ ತಡೆಗಟ್ಟಲು ಇರುವ ಲೋಕಾಯುಕ್ತದಲ್ಲೂ ಕೆಲಸ ಮಾಡುತ್ತಿರುವವರು ಈ ರಾಜ್ಯದ ನೌಕರರುಗಳೇ ಅವರುಗಳೇ ದಾರಿಯಲ್ಲಿ ಅದನ್ನು ಎಲ್ಲೋ ತಪ್ಪಿಸಿ ಇಟ್ಟಿದ್ದರೆ ಅದೂ ಕಷ್ಟವಾಗುತ್ತದೆ ಲೋಕಾಯುಕ್ತದವರು ಮತ್ತು ಉಪಲೋಕಾಯುಕ್ತದವರು ಇಂಥದ್ದನ್ನು ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳಿ ಎಂದು ಇಲಾಖೆಗೆ ಬರೆದು ಅದು ಬರುವ ದಾರಿಯಲ್ಲೇ ನಿಂತುಹೋದರೆ ನಮಗೂ ಕಷ್ಟವಾಗುತ್ತದೆ ಅದರ ಬಗ್ಗೆ ನಮ್ಮ ಕಾರ್ಯದರ್ಶಿಯವರಿಗೆ 3–4 ದಿವಸದ ಹಿಂದೆಯೇ ಸೂಚನೆ ಕೊಟ್ಟಿದ್ದೇನೆ ಉಪ ಲೋಕಾಯುಕ್ತದವರೊಂದಿಗೆ ಇದರ ಬಗ್ಗೆ ಮಾತನಾಡಿ ಅದರ ಮಾಹಿತಿಯನ್ನು ತರಿಸಿಕೊಳ್ಳಿ ಎಂದು ಹೇಳಿದ್ದೇನೆ ಇನ್ನೊಂದು ಐ ಪಿ ಎಸ್ officers ಕೆಲಸದ ಬಗ್ಗೆ ಹೇಳಿದರು ಇದು ನಾನು ಬಂದ ಮೇಲೆ ನಡೆದಿರತಕ್ಕದ್ದಲ್ಲ ಕಮಿಷನರ್ ಆಗಿ ನೇಮಕ ಮಾಡುವುದು ಡಿ ಪಿ ಎ ಆರ್

ಇಲಾಖೆ ಬಹಳ ವರ್ಷದಿಂದ ಐ ಪಿ ಎಸ್ ಅಧಿಕಾರಿಗಳನ್ನು ಕಮಿಷನರ್ ಆಗಿ ಹೇಳಿದ್ದಾರೆ ನಮ್ಮ ಹಿರಿಯ ಸದಸ್ಯರು ಹೇಳಿದಂತೆ ಐ ಪಿ ಎಸ್ ಅಧಿಕಾರಿಗಳನ್ನೇ ಅಲ್ಲಿಗೆ ಕಾನೂನಿನ ಪ್ರಕಾರ ಹಾಕಬೇಕಾಗಿದೆ ಕಳೆದ ಹತ್ತು ಹದಿನೈದು ವರ್ಷದಿಂದ ಇದನ್ನು ನೋಡಿಕೊಂಡು ಬಂದರೆ ಒಬ್ಬರೋ ಇಬ್ಬರೋ ಐ ಪಿ ಎಸ್ officers ಬಿಟ್ಟರೆ ಉಳಿದ ಎಲ್ಲಾ ಸಮಯದಲ್ಲೂ ಐ ಪಿ ಎಸ್ officers ಗಳೇ ಅಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಅದರ ಬಗ್ಗೆ ಸಹ ನಾನು ಡಿ ಪಿ ಎ ಆರ್ ಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲು ಬಯಸುತ್ತೇನೆ ಇನ್ನು ckeck post ಬಗ್ಗೆ ಹೇಳುವುದಾದರೆ, ಒಂದು ತಿಂಗಳ ಹಿಂದೆ ಇದರ ಬಗ್ಗೆ ಲೋಕಾಯುಕ್ತ ರೈಡ್, ಟಿ ವಿ 9 ಇವರೆಲ್ಲ visit ಮಾಡಿದ ನಂತರ ನಾನು ಒಂದು ಸಭೆಯನ್ನು ಮಾಡಿ ಕಾರ್ಯದರ್ಶಿಯವರಿಗೆ ಸೂಚನೆಯನ್ನೂ ಕೊಟ್ಟಿದ್ದೇನೆ ಕಳೆದ 15 ವರ್ಷದಿಂದ ಈ ಇಲಾಖೆ ಒಂದು ರೀತಿ ಇದಕ್ಕೆ ಸರ್ಕಾರದ ಪ್ರಭಾವ ಇದೆಯೋ ಅಥವಾ ಅಲ್ಲಿರುವ inspectors ಪ್ರಭಾವ ಇದೆಯೋ ಎನ್ನುವುದನ್ನು ಬಹುಶಃ ನಾನು ಹೇಳುವುದಕ್ಕಿಂತ ಹೆಚ್ಚಾಗಿ

ಶ್ರೀ ಕೆ ಆರ್ ರಮೇಶ್ ಕುಮಾರ್ ಹಿಂದೆ ಒಬ್ಬರು ಸಾರಿಗೆ ಸಚಿವರು ಇದ್ದರು ಅವರು ನಮಗೆ ಬಹಳ ಆತ್ಮೀಯರು ಪಾಪ ಅವರು ನನ್ನ ಹತ್ತಿರ ಬಹಳ ಗೋಳಾಡಿಕೊಂಡು ಬಂದರು ಏಕೆಂದರೆ, inspectorsನ ಒಂದು ಸಂಘ ಇದೆ ಇಲಾಖೆಯಲ್ಲಿ ವರ್ಗಾವರ್ಗಿ ಮಾಡುವವರು ಆ Unionನವರು ಅವರೆಲ್ಲಾ ಮಾತನಾಡಿಕೊಂಡು ಎಲ್ಲಾ ಪ್ಯಾಕೇಜ್ ಮಾಡಿ ಸೀದಾ ಮುಖ್ಯಮಂತ್ರಿಯವರ ಹತ್ತಿರಕ್ಕೆ ಹೋಗಿಬಿಡುತ್ತಾರೆ Chief Ministerಗೂ Transport Ministerಗೂ ಹೊಂದಾಣಿಕೆ ಇದ್ದರೆ ತೊಂದರೆ ಇಲ್ಲ ಇಲ್ಲದಿದ್ದರೆ Transport Minister ಮರ್ಯಾದೆ ಮೂರು ಕಾಸು ಆಗಿಬಿಡುತ್ತದೆ ಇವರು ಇಲ್ಲೇ ಕುಳಿತಿರುತ್ತಾರೆ ಅವರು ಪೆನ್ನು ಪೇಪರ್ ಹಿಡಿದುಕೊಂಡು ಹೋಗಿ ವರ್ಗ ಮಾಡಿಸಿಕೊಂಡು ಬಂದೇ ಬಿಡುತ್ತಾರೆ ಈಗ ಅವರಲ್ಲೇ ಎರಡು ಯೂನಿಯನ್‌ಗಳಿದೆ ಮತ್ತೆ ಅದಕ್ಕೆ ಜಾತಿ, Motor Vehicle Inspectors ಗಳು fitness certificate ಕೊಡುವುದು, ಆ vehicle accident ಮಾಡಿ ದಾರಿಯಲ್ಲೇ ನಮ್ಮನ್ನು ನಿಮ್ಮನ್ನು ಕೊಲ್ಲುವುದು!

ಶ್ರೀ ಎನ್ ಚಲುವರಾಯಸ್ವಾಮಿ ನೇಮಕಾತಿ ವಿಚಾರದಲ್ಲಿ ನನ್ನ ಗಮನಕ್ಕೆ ತಂದರು ನಾನು ಬಂದ ಮೇಲೆ ಬಹುಶಃ ಉಳಿದಿರತಕ್ಕ 150 ಹಾಗೂ ಹೆಚ್ಚುವರಿ 100 ಪೋಸ್ಟ್‌ನ್ನು ಮಂಜೂರು ಮಾಡಿ ಕೆ ಪಿ ಎಸ್ ಸಿ ಗೆ ನೇಮಕಾತಿ ಮಾಡಲು ಕಳುಹಿಸಿದ್ದೇವೆ ಈ ಮಧ್ಯೆ ಕೋರ್ಟ್‌ಗೆ ಹೋಗಿ ಅವರು ಸ್ಟೇ ತರಲಾಗಿ ತಾತ್ಕಾಲಿಕವಾಗಿ ನೇಮಕಾತಿ ನಿಂತುಹೋಗಿತ್ತು ಆ ಸ್ಟೇಯನ್ನು ಸಹ ನಾವು ತೆರವುಗೊಳಿಸಿದ್ದೇವೆ ಅವರು ಎಷ್ಟೇ ಒತ್ತಡ, ಪ್ರಭಾವಿಗಳಾದರೂ ನೇಮಕಾತಿ ವಿಚಾರದಲ್ಲಿ ನಾವು ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೆಯೇ

ನೇಮಾಕತಿ ಮಾಡಲೇ ಬೇಕು, ಅತ್ಯಂತ ಅವಶ್ಯಕತೆ ಇದೆ ಇವತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬುದನ್ನು ಗಮನಿಸಿ ಕೆ ಪಿ ಎಸ್ ಸಿ ಮೂಲಕ ನೇಮಕಾತಿ ಮಾಡಲು ಸ್ಪಷ್ಟವಾದ ಸೂಚನೆಯನ್ನು ಸರ್ಕಾರ ಕಳುಹಿಸಿಕೊಟ್ಟಿದೆ ಕೋರ್ಟ್‌ನಿಂದ ಕೂಡ ಸ್ಟೇ ವೆಕೇಟ್ ಆಗಿದೆ ಜುಲೈನಲ್ಲಿ ಕೂಡಲೇ ನೇಮಕಾತಿ ಮಾಡುತ್ತೇವೆಂದು ಹೇಳಿದ್ದರು ಪ್ರತಿ ವಾರ ತಮ್ಮ ಕಾರ್ಯದರ್ಶಿಗಳು ಕೆ ಪಿ ಎಸ್ ಸಿ ಜೊತೆ ಪ್ರಸ್ತಾಪ ಮಾಡುತ್ತಿದ್ದಾರೆ ಇದರ ಜೊತೆಗೆ ckeck postನಲ್ಲಿ ಇರತಕ್ಕ Inspectorsನಲ್ಲಿ ಹೆಚ್ಚು ಜನರಿದ್ದಾರೆಂದು ಹೇಳಿದ್ದಾರೆ ಅದು ವಾಸ್ತವ ಅದನ್ನು ಸುಳ್ಳು ಎಂದು ನಾನು ಹೇಳುವುದಿಲ್ಲ ಅದರ ಬಗ್ಗೆ ಒಂದು ತಿಂಗಳ ಹಿಂದೆಯೇ ನಾನು ಒಂದು ಸಭೆ ಮಾಡಿ ಯಾವಾಗ ಲೋಕಾಯುಕ್ತ ರೈಡ್‌ಮಾಡಿದರು, ಆಗ ಎಷ್ಟು ಜನರು check post ನಲ್ಲಿ ಕೆಲಸ ಮಾಡುತ್ತಿದ್ದಾರೆ, ಇಲಾಖೆಯ ಬೇರೆ ಬೇರೆ office ನಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ಅದರ ಪಟ್ಟಿ ತರಿಸಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ Check postಗೆ ಎಷ್ಟು ಅವಶ್ಯಕತೆ ಇದೆಯೋ ಅದನ್ನು ಬಿಟ್ಟು, check postನಲ್ಲಿ ಯಾವ ರೀತಿಯಾಗಿ ಕೆಲಸ ಮಾಡಬೇಕು ಎಂಬುದನ್ನು ತೀರ್ಮಾನಿಸುತ್ತೇವೆ ತಮಿಳುನಾಡಿನಲ್ಲಿ ಬೇರೆ ರೀತಿಯ ಒಂದು system ಇದೆ ಅದರ ಬಗ್ಗೆ ಅಲ್ಲಿಂದಲೂ ವರದಿ ತರಿಸಿದ್ದೇನೆ ಅದರ ಆಧಾರದ ಮೇಲೆ ಒಂದು ತೀರ್ಮಾನವನ್ನು ಸ್ಪಷ್ಟವಾಗಿ ತೆಗೆದುಕೊಳ್ಳುತ್ತೇನೆ ಐ ಪಿ ಎಸ್ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ ಮಾನ್ಯ ರಮೇಶ್‌ಕುಮಾರ್ ರವರು ನೀವು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೀರೋ ಅದವಾ ಬೇರೆಯವರ ಪ್ರಭಾವ ಇದೆಯೋ ಎಂದು ಕೇಳಿದರು ನನಗೆ ಕೆಲಸ ಮಾಡುವಲ್ಲಿ ಯಾವುದೇ ರೀತಿಯ ಪ್ರಭಾವವೇನಿಲ್ಲ ಸರ್ಕಾರದಲ್ಲಿ ನಾನು ಮಂತ್ರಿಯಾಗಿ ನಮ್ಮ ಇಲಾಖೆಯಲ್ಲಿ ಕೆಲಸ ಮಾಡಲು ಸಂಪೂರ್ಣವಾದ ಸ್ವಾತಂತ್ರವನ್ನು ನಮ್ಮ ಮುಖ್ಯಮಂತ್ರಿಯವರು, ನಮ್ಮ ಸರ್ಕಾರ ನನಗೆ ಕೊಟ್ಟಿದೆ ಖಂಡಿತ ಮಾಡುತ್ತಿದ್ದೇನೆ

ಶ್ರೀ ಆರ್ ವಿ ದೇಶ್‌ಪಾಂಡೆ ಸ್ವಾತಂತ್ರವನ್ನು ಕೊಟ್ಟಿದೆ ಎಂದು ಹೇಳುವಂಥ ಪರಿಸ್ಥಿತಿ ನಿಮಗೆ ಬಂತಲ್ಲಾ! ಆದ್ದರಿಂದ ನಿಮಗೆ ಏನೂ ಎಲ್ಲ ಎಂದು ಆಯಿತು

ಶ್ರೀ ಎನ್ ಚಲುವರಾಯಸ್ವಾಮಿ : ಅವರು ಹಾಗೆ ಹೇಳಿದ್ದರಿಂದ ಹೇಳಬೇಕಾಯಿತು

ಶ್ರೀ ಕೆ ಆರ್ ರಮೇಶ್‌ಕುಮಾರ್ : ಸ್ವಾತಂತ್ರ ಎಂದು ತಾವು ಹೇಳಬೇಕಾಗಿದ್ದರೆ ಚನ್ನಿಗಪ್ಪನವರು ಒಂದು ರೀತಿಯಲ್ಲಿ ನೋಡುತ್ತಿದ್ದರು ಇಬ್ಬರದ್ದೂ ಒಂದೇ ಪರಿಸ್ಥಿತಿ!

ಶ್ರೀ ಎನ್ ಚಲುವರಾಯಸ್ವಾಮಿ ಈ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ನಾವು ತಂದಿದ್ದೇವೆ ರಮೇಶ್‌ಕುಮಾರ್‌ರವರು ನಮ್ಮನ್ನು ಟೀಕೆ ಮಾಡುವುದಕ್ಕೋಸ್ಕರವೇ ಅಥವಾ ಸರ್ಕಾರವನ್ನು ಟೀಕೆ ಮಾಡುವುದ ಕ್ಕೋಸ್ಕರವೇ ಹೇಳಿದರೆ ನಮಗೇನು ಬೇಜಾರು ಆಗುವುದಿಲ್ಲ ರಮೇಶ್‌ಕುಮಾರ್‌ರವರು ಹಿರಿಯ ಸದಸ್ಯರಾಗಿದ್ದರಿಂದ ಒಳ್ಳೆಯದನ್ನೂ ಒಪ್ಪಬೇಕಾಗುತ್ತದೆ ನಾನು ಇದೇ ಸದನದಲ್ಲಿ ಆರೋಗ್ಯ ಸಚಿವನಾಗಿಯೂ ಕೆಲಸ ಮಾಡಿದ್ದೇನೆ ಇವತ್ತು ಸಾರಿಗೆ ಸಚಿವನಾಗಿಯೂ ಕೆಲಸ ಮಾಡುತ್ತಿದ್ದೇನೆ ನನ್ನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ

ಶ್ರೀ ಧರ್ಮಸಿಂಗ್ : ತಾವು ಆರೋಗ್ಯ ಸಚಿವರಾಗಿ ಕೆಲಸ ಮಾಡಿದ್ದು ನನ್ನ ಕಾಲದಲ್ಲಿ ನನ್ನ ಕಾಲದಲ್ಲಿ ಸ್ವಾತಂತ್ರ ಇತ್ತು ಸಂಜೆ 7 ಗಂಟೆಗೆ ಬಂದರೂ ನಾನು ಸಹಿ ಮಾಡಿ ಕೊಡುತ್ತಿದ್ದೆ ಆದರೆ ಈಗ ಆ ರೀತಿ ಇದೆಯೇ?

ಶ್ರೀ ಬಸವರಾಜ ರಾಯರೆಡ್ಡಿ File has to be cleared by Mr Revanna ಅಲ್ಲವೇ?

ಉಪಾಧ್ಯಕ್ಷರು : ಹೆಸರನ್ನು ಏಕೆ ಹೇಳುತ್ತೀರಿ? ಅವರು ಸದನದಲ್ಲಿ ಇಲ್ಲ ಅವರ ಹೆಸರನ್ನೆಲ್ಲ ಉಪಯೋಗಿಸಬೇಡಿ

ಶ್ರೀ ಧರ್ಮಸಿಂಗ್ ನಾನು ನಿಮಗೆ ಬೆಂಬಲ ಕೊಟ್ಟೆ ಹಿಂದಿನ ಆ ಸ್ವಾತಂತ್ರ ಈಗ ಇಲ್ಲ

ಶ್ರೀ ಎನ್ ಚಲುವರಾಯ ಸ್ವಾಮಿ ನಾವು ಸತ್ಯವನ್ನು ಹೇಳುತ್ತೇವೆ ನೀವು ಹೇಳುವುದಿಲ್ಲ ಅದೇ ನಮಗೂ ನಿಮಗೂ ಇರುವ ವ್ಯತ್ಯಾಸ ಇಲ್ಲಿ ಇರತಕ್ಕ ಎಲ್ಲಾ ಸಚಿವರು ನಿಮ್ಮ ಜೊತೆಯಲ್ಲಿ ಕೆಲಸ ಮಾಡಿದಂಥವರು ಯಾರೂ ಧರ್ಮಸಿಂಗ್ ಸಾಹೇಬರಿಂದ ತೊಂದರೆಯಾಯಿತು, ಅಡಚಣೆಯಾಯಿತು, ನೀವು ಸರಿ ಇಲ್ಲವೆಂದು ಹೇಳುವುದಿಲ್ಲ ನಾವು ಪಕ್ಷ ಮತ್ತು ಸಿದ್ಧಾಂತದಲ್ಲಿ ಬೇಜಾರಾಗಿ ಈ ಕಡೆ ಬಂದಿದ್ದರೂ ಇವತ್ತೂ ನಿಮ್ಮ ವಿಚಾರದಲ್ಲಿ ಸಂಪೂರ್ಣವಾದ ನಂಬಿಕೆ ಇದೆ, ಗೌರವವಿದೆ ಆದರೆ ಇವತ್ತೂ ನಮಗೇನು ಕಡಿಮೆಯಾಗಿಲ್ಲ ನಮಗೆ ನೀವು ಎಷ್ಟು ಸ್ವಾತಂತ್ರ ಕೊಟ್ಟಿದ್ದೀರೋ ಅಷ್ಟೇ ಸ್ವಾತಂತ್ರ್ಯ ಇವತ್ತೂ ಇದೆ ನನ್ನ ಇಲಾಖೆಯಲ್ಲಿ ನಾನು ಕಟ್ಟಿಬದ್ಧವಾಗಿ ಕೆಲಸ ಮಾಡುತ್ತಿದ್ದೇನೆ ಸಾಕಷ್ಟು ಸುಧಾರಣೆಗಳನ್ನು ತಂದಿದ್ದೇನೆ 50-60 ವರ್ಷಗಳಿಂದ ನಡೆದುಕೊಂಡು ಬಂದಿರುತ್ತವಲ್ಲಾ, ನಾನು ಮೊದಲು ಹಿಂದೆ ಆ ಕೊನೆಯಲ್ಲಿ ಕುಳಿತಿದ್ದೆ ಒಂದು ಹಗರಣದ ಬಗ್ಗೆ ಬಹಳ ಚರ್ಚೆಯಾಯಿತು ನಮ್ಮ ಅಂದಿನ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು ಈ ಭ್ರಷ್ಟಾಚಾರ, ಅವ್ಯವಹಾರ ಮುಂತಾದವುಗಳೆಲ್ಲಾ ನಾನು ಬಂದಾಗ ಪ್ರಾರಂಭವಾದದ್ದಲ್ಲ ಕಳೆದ 50 ವರ್ಷದಿಂದ ನಡೆದುಕೊಂಡು ಬಂದಿದೆ ನಾನು ಒಂದು ದಿಟ್ಟ ಹೆಜ್ಜೆಯನ್ನು ಇಡಬಹುದು ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ನಾನು ಇದರ ಬಗ್ಗೆ

ಮಾಡಬಹುದು ಎಂದು ಹೇಳಿದರು ಹಾಗೆ ಇವತ್ತು over load ಆಗಿರಬಹುದು, ಬೇರೆ ಬೇರೆ ರೀತಿಯ ಅವ್ಯವಹಾರ ಆಗಿರಬಹುದು ಈ ಇಲಾಖೆಯಲ್ಲಿ ಸಾಧಾರಣ ಮಟ್ಟಿಗೆ ನಾನು ಸುಧಾರಣೆಯನ್ನು ನಾನು ತಂದಿದ್ದೇನೆ ಇರುವಷ್ಟು ದಿವಸ ಗಂಭೀರವಾದ ರೀತಿಯಲ್ಲಿ ಇವತ್ತು ಏನೇನು ರಮೇಶ್‌ಕುಮಾರ್‌ರವರು ಹೇಳಿದ್ದಾರೆ ಅದರ ಬಗ್ಗೆ ಬೇಜಾರು ಎಂದು ಮಾಡಿಕೊಳ್ಳುವುದಿಲ್ಲ ಟೀಕೆಯನ್ನು ಮಾಡಿದಾಗ ಅದನ್ನು ಟೀಕೆ ಎಂದು ಸಹ ಅಂದುಕೊಳ್ಳುವುದಿಲ್ಲ ಅದನ್ನು ಸ್ವಾಗತ ಮಾಡು ಶಕ್ತಿ ಮೀರಿ ಇದರ ಬಗ್ಗೆ ಕ್ರಮ ಜರುಗಿಸುತ್ತೇನೆ ಎಂದು ತಮ್ಮ ಮೂಲಕ ಹೇಳುತ್ತೇನೆ

ಉಪಾಧ್ಯಕ್ಷರು ಈಗ ಸದನವನ್ನು ಮಧ್ಯಾಹ್ನ 3–45ಕ್ಕೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 2–31 ಕ್ಕೆ ಮುಕ್ತಾಯಗೊಂಡು ಮತ್ತೆ 3–45ಕ್ಕೆ ಸೇರಲು ತೀರ್ಮಾನಿಸಿತು)

(ವಿಧಾನ ಸಭೆಯ ಕಲಾಪವು ಸಂಜೆ 4 ll‌ಕ್ಕೆ ಪ್ರಾರಂಭವಾಯಿತು

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

5) **ವಿತ್ತೀಯ ಕಾರ್ಯಕಲಾಪ 2007–08ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ**

ಅಧ್ಯಕ್ಷರು ಎಸ್ ಎಸ್ ಪಾಟೀಲ್‌ರವರೆ ನಿಮ್ಮ ಭಾಷಣ ಇನ್ನೂ ಮುಗಿದಿಲ್ಲವೇ?

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನೀವು ಇದ್ದೀರಿ, ಬೇರೆ ಎಲ್ಲ ಚರ್ಚೆ ಆಯಿತು

ಅಧ್ಯಕ್ಷರು ಬೇಗ ಮುಗಿಸಿಬಿಡಿ

ಶ್ರೀ ಎಸ್ ಎಸ್ ಪಾಟೀಲ್(ಮುಂಡರಗಿ) ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ, ಈ ದಿವಸ ನಾವು ಈ ಸದನ ಪ್ರಾರಂಭವಾದಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿತ್ತು ಎಂದು ಅನಿಸುತ್ತದೆ ಆದರೆ ಅದು ಗೊತ್ತಾಗಲಿಲ್ಲ ನಮ್ಮ ರಾಷ್ಟ್ರದ ಅತ್ಯುನ್ನತ ಪದವಿಯಾದಂತಹ ರಾಷ್ಟ್ರಮಾತೆಯಾಗಿ ಆಯ್ಕೆಯಾಗಿರುವಂತಹ ಪ್ರತಿಭಾ ಪಾಟೀಲ್‌ರವರಿಗೆ ನಾನು ಈ ಮೂಲಕ ಕೃತಜ್ಞತೆಗಳನ್ನು ಹಾಗೂ ಶುಭಾಶಯಗಳನ್ನು ಕೂಡ ಹೇಳಬಯಸುತ್ತೇನೆ ಅದೇ ರೀತಿ ನಮ್ಮ ಹಿಂದಿನ ರಾಷ್ಟ್ರಪತಿಯಾದ ಡಾ ಅಬ್ದುಲ್‌ಕಲಾಂರವರು ಕೂಡ ಕಳೆದ ಐದು ವರ್ಷಗಳಿಂದ ರಾಷ್ಟ್ರದ ಹಿತಚಿಂತನೆ ಮಾಡಿ ಅದರಲ್ಲೂ ನಮ್ಮ ವಿಧಾನಸಭೆಗೆ ಬಂದು ನಮ್ಮ ರಾಜ್ಯದ ಬಗ್ಗೆ ಉತ್ತಮವಾದ ಕಲ್ಪನೆಯನ್ನು ಕೊಟ್ಟು, ರಾಜ್ಯ ಹೇಗೆ ನಡೆಯಬೇಕು ಎಂದು ಕಳಕಳಿಯ ಮಾತು ಹೇಳಿದ್ದಾರೆ ಅವರಿಗೂ ಕೂಡ ಅಭಿನಂದಿಸುತ್ತೇನೆ